# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 568 (700)
ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 18-08-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರ ಕೊರತೆಯಿರುವ ಉಪನ್ಯಾಸಕರಿಗೆ ಕಾರ್ಯಭಾರ ಸರಿಪಡಿಸಲು ಯಾವುದೇ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ; | ಕರ್ನಾಟಕ ಶಾಲಾ ಶಿಕ್ಷಣ ನಿಯಮ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೊಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 17 ರ ಪ್ರಕಾರ ಅನುದಾನಿತ ಉಪನ್ಯಾಸಕರಿಗೆ ನಿಯಮಾನುಸಾರ ಕಾರ್ಯಭಾರ ಇಲ್ಲದಿದ್ದ ಸಂದರ್ಭದಲ್ಲಿ, 20 ಕಿ.ಮೀ ವ್ಯಾಪ್ತಿಯೊಳಗಿರುವ ಇನ್ನೊಂದು ಅನುದಾನಿತ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಲು ಅವಕಾಶ ಇರುತ್ತದೆ. ಸದರಿ ಕಾರ್ಯವನ್ನು ಆಯಾ ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.<br><br>ಒಂದು ವೇಳೆ ನಿಯಮದ ಪ್ರಕಾರ ಖಾಲಿ ಹುದ್ದೆ ಲಭ್ಯವಿಲ್ಲದಿದ್ದಾಗ, ಅಂತಹ ಉಪನ್ಯಾಸಕರನ್ನು ರಾಜ್ಯದಲ್ಲಿ ಇರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಸಂಬಂಧಿಸಿದ ಬೋಧನಾ ವಿಷಯದಲ್ಲಿ ನಿಗಧಿತ ಕಾರ್ಯಭಾರವನ್ನು ಹೊಂದಿರುವಂತಹ ಹುದ್ದೆಗೆದುರು ವರ್ಗಾಯಿಸಲು 2024 ರ ನಿಯಮಾವಳಿಗಳ ನಿಯಮ 29 ರನ್ವಯ ಅವಕಾಶ ಕಲ್ಪಿಸಲಾಗಿದೆ. |
| ಆ) | ಈಗಾಗಲೇ ಸದನದಲ್ಲಿ ಸರ್ಕಾರವು ಭರವಸೆ ನೀಡಿದಂತೆ, ಶೂನ್ಯ ಕಾರ್ಯಭಾರದ ಕಾರಣ ನೀಡಿ ಸೇವೆಯಿಂದ ವಿಮುಕ್ತಿಗೊಳಿಸಿರುವ ಉಪನ್ಯಾಸಕರಿಗೆ ಪರ್ಯಾಯ ವ್ಯವಸ್ಥೆ ಮಾಡಿ ಸೇವಾ ಭದ್ರತೆ ನೀಡಲಾಗಿದೆಯೇ; | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ಕಾರ್ಯಭಾರ ಅಂಶದ ಹಿನ್ನೆಲೆಯಲ್ಲಿ, ಸೇವೆಯಿಂದ ಸಿಬ್ಬಂದಿಯನ್ನು ವಿಮುಕ್ತಿಗೊಳಿಸಿದ್ದಲ್ಲಿ, ನಂತರದಲ್ಲಿಯೂ ಸಹ The Karnataka educational institutions (Recruitment of employees in private aided primary and secondary educational institutions) rules 1999 ರ ನಿಯಮ 11(06) ರನ್ವಯ ಕಾರ್ಯಭಾರ ಹೊಂದಿರುವ ಖಾಲಿ ಹುದ್ದೆ ಲಭ್ಯವಾದ್ದಲ್ಲಿ, ಪುನಃ ಸೇವೆಗೆ ತೆಗೆದುಕೊಳ್ಳಲು ಅವಕಾಶ ಇರುತ್ತದೆ. |
| ಇ) | ಸರ್ಕಾರಿ ಆದೇಶ ಸಂಖ್ಯೆ: ಇಪಿ/09/ಟಿಪಿಯು/2024, ದಿನಾಂಕ: 12.09.2024 ರಲ್ಲಿ ಶೂನ್ಯ ಕಾರ್ಯವಿರುವ ಉಪನ್ಯಾಸಕರನ್ನು ನಿಯೋಜನೆ | ಸದರಿ ಅಂಶಕ್ಕೆ ಸಂಬಂಧಿಸಿದಂತೆ ಯಾವುದೇ ಮನವಿ/ನಿರ್ದೇಶನಗಳು ಸ್ವೀಕೃತವಾಗಿರುವುದಿಲ್ಲ. ಶೂನ್ಯ ಕಾರ್ಯಭಾರವಿರುವ ಉಪನ್ಯಾಸಕರನ್ನು ನಿಯೋಜನೆ ಮಾಡಲು ಯಾವುದೇ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆ |

| | | |
|---|---|---|
| | ಮಾಡಲು ಯಾವುದೇ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆ ಇಲ್ಲದಿದ್ದಾಗ ಸೇವೆಯಿಂದ ವಿಮುಕ್ತಿಗೊಳಿಸದೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಸೇವಾ ಭದ್ರತೆಯನ್ನು ನೀಡಲು ಆದೇಶದಲ್ಲಿ ತಿದ್ದುಪಡಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೇ; | ಇಲ್ಲದಿದ್ದಾಗ ಸೇವೆಯಿಂದ ವಿಮುಕ್ತಿಗೊಳಿಸದೆ ಪರ್ಯಾಯ ವ್ಯವಸ್ಥೆ ಮಾಡಲು ಅವಕಾಶ ಇರುವುದಿಲ್ಲ. |
| (ಈ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಾನಾ ಕಾರಣಗಳಿಂದ ತೆರವಾದ ಹುದ್ದೆಗಳಿಗೆ ಸರ್ಕಾರ ತುಂಬಲು ಅವಕಾಶ ನೀಡುವವರೆಗೆ, ಪಠ್ಯ ಬೋಧನೆ ಮಾಡಲು ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ: ಸರ್ಕಾರದಿಂದ ಭರ್ತಿಗೆ ಅವಕಾಶ ನೀಡುವವರೆಗೆ ಪಠ್ಯಬೋಧನೆಗೆ ಉಪನ್ಯಾಸಕರ ನೇಮಕಾತಿಗೆ ಯಾವ ಮಾನದಂಡದಡಿಯಲ್ಲಿ ಯಾರು, ಯಾವ ರೀತಿಯಲ್ಲಿ ನೇಮಕ ಮಾಡಲಾಗುವುದು; | • ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ ಆಯಾ ಕಾಲೇಜಿನ ಆಡಳಿತ ಮಂಡಳಿಯೇ ಆಗಿರುತ್ತದೆ.<br>• ಹೀಗಾಗಿ ಸರ್ಕಾರದಿಂದ ಖಾಲಿ ಇರುವ ಅನುದಾನಿತ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡಲು ಅವಕಾಶ ನೀಡುವವರೆಗೂ ಸಂಬಂಧಿಸಿದ ಕಾಲೇಜಿನ ಆಡಳಿತ ಮಂಡಳಿಗಳೇ ತಮ್ಮ ಸ್ವಂತ ಖರ್ಚಿನಿಂದ ಅನುದಾನರಹಿತವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆಗೆ ಕ್ರಮವಹಿಸಬೇಕಾಗಿರುತ್ತದೆ.<br>• ಕರ್ನಾಟಕ ಶಾಲಾ ಶಿಕ್ಷಣ ನಿಯಮ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೊಂದಣಿ ಹಾಗೂ ಸಹಾಯಾನುದಾನ, ಇತ್ಯಾದಿ) 2024 ರ ನಿಯಮ 17 ರ ಪ್ರಕಾರ ಅನುದಾನಿತ ಉಪನ್ಯಾಸಕರಿಗೆ ನಿಯಮಾನುಸಾರ ಕಾರ್ಯಭಾರ ಇಲ್ಲದಿದ್ದ ಸಂದರ್ಭದಲ್ಲಿ 20 ಕಿ.ಮೀ. ವ್ಯಾಪ್ತಿಯೊಳಗಿರುವ ಇನ್ನೊಂದು ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಅದೇ ಬೋಧನಾ ವಿಷಯದ ಅನುದಾನಿತ ಖಾಲಿ ಹುದ್ದೆಗೆ ನಿಯೋಜಿಸಲು ಅವಕಾಶ ಇರುತ್ತದೆ. ಸದರಿ ಕಾರ್ಯವನ್ನು ಆಯಾ ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.<br>• ಸದರಿ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದಿಂದ ಅನುಮತಿ ನೀಡಿದ ನಂತರ ಆಗ ಸದರಿ ಕಾಲೇಜಿನಲ್ಲಿ ಅನುದಾನರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಸಹ ನಿಯಮಾನುಸಾರ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ.<br>• ಅನುದಾನಿತ ಬೋಧಕರಿಗೆ ಪೂರ್ಣ ಕಾರ್ಯಭಾರ ಇಲ್ಲದ್ದಿದಲ್ಲಿ ವೇತನ ಪಾವತಿಸಲು ಅಗತ್ಯ ಕಾರ್ಯಭಾರ ಹೊಂದಾಣಿಕೆ ಮಾಡಲು ಇಲಾಖೆ ಕ್ರಮವಹಿಸಬೇಕಾಗಿರುವುದರಿಂದ, |
| (ಉ) | ಹೊಸ ಆದೇಶದಂತೆ ಕಾರ್ಯಭಾರ ಸರಿದೂಗಿಸಲು ಮತ್ತೊಂದು ಪದವಿ ಪೂರ್ವ ಕಾಲೇಜಿನ ಖಾಲಿ ಹುದ್ದೆಗೆ ನಿಯೋಜನೆ ಮಾಡಿದಾಗ ಈಗಾಗಲೇ ಆಡಳಿತ ಮಂಡಳಿಯಿಂದ ನೇಮಕವಾಗಿ ಕರ್ತವ್ಯ ನಿರ್ವಹಿಸಿರುವ ಉಪನ್ಯಾಸಕರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ; ಅಥವಾ ಪೂರ್ಣಕಾಲಿಕವಾಗಿ ನೇಮಕ ಮಾಡಲು ಅವಕಾಶ ಹಾಗೂ ಸ್ಪಷ್ಟ ಮಾರ್ಗಸೂಚಿಗಳಿವೆಯೇ; ಸರ್ಕಾರ ಹುದ್ದೆ ತುಂಬಲು ಅವಕಾಶ ನೀಡಿದಾಗ ಅವರನ್ನೇ ಅನುದಾನಕ್ಕೆ ಒಳಪಡಿಸಲು ಅವಕಾಶವಿದೆಯೇ; ಹೊಸ ನೇಮಕ ಮಾಡಿದ್ದಲ್ಲಿ, ಈ ಉಪನ್ಯಾಸಕರಿಗೆ ಪರ್ಯಾಯ ವ್ಯವಸ್ಥೆ ಮಾಡಲು ಅವಕಾಶವಿದೆಯೇ; ತಿಳಿಸುವುದು: | |

| | | |
|---|---|---|
| (ಊ) | 2024 ರ ಆದೇಶದ ಪೂರ್ವದಲ್ಲಿ ಹುದ್ದೆಯನ್ನು ವೇತನಾನುದಾನಕ್ಕೆ ಒಳಪಡಿಸುವಾಗ ಕಾರ್ಯಭಾರದ ಆಧಾರದಲ್ಲಿ ಅಥವಾ ಒಂದು ವಿಷಯಕ್ಕೆ ಒಂದು ಉಪನ್ಯಾಸಕರ ನೆಲೆಯಲ್ಲಿ ಅನುದಾನ ನೀಡಲಾಗಿದೆಯೇ; ಕಾರ್ಯಭಾರ ಕೊರತೆಯಿರುವ ಉಪನ್ಯಾಸಕರಿಗೆ ಕಾರ್ಯಭಾರವನ್ನು ಸರಿದೂಗಿಸಲು ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸರಿ ಸಮಾನವಾದ ಖಾಲಿ ಹುದ್ದೆಗಳಿವೆಯೇ; ಇದ್ದಲ್ಲಿ, ಈ ಬಗ್ಗೆ ಸಾಧಕ-ಬಾಧಕಗಳನ್ನು, ತಜ್ಞರ ಅಭಿಪ್ರಾಯ ಪಡೆದುಕೊಂಡು ಸರ್ಕಾರದ ಸಾಮಾಜಿಕ ಬದ್ಧತೆ ಹಾಗೂ ಉದ್ಯೋಗಿಗೆ ಸೇವಾ ಭದ್ರತೆ ನೀಡುವ ನಿಟ್ಟಿನಲ್ಲಿ ಹೊಸ ಆದೇಶವನ್ನು ಹೊರಡಿಸಲಾಗಿದೆಯೇ? | ಕಾರ್ಯಭಾರ ಹೊಂದಾಣಿಕೆ ಸಲುವಾಗಿ ಅನುದಾನಿತ ಉಪನ್ಯಾಸಕರನ್ನು ಖಾಲಿ ಇರುವ ಅನುದಾನಿತ ಹುದ್ದೆಗೆ ನಿಯೋಜಿಸಬೇಕಿರುತ್ತದೆ, ಅಂತಹ ಅನುದಾನಿತ ಹುದ್ದೆಗಳಲ್ಲಿ, ಈಗಾಗಲೇ ಅನುದಾನರಹಿತವಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವುದು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.<br>• ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರಿಗೆ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ: 27-09-2018 ರಲ್ಲಿ ಪ್ರಾಯೋಗಿಕವಲ್ಲದ ವಿಷಯಗಳಿಗೆ 20 ಗಂಟೆ ಹಾಗೂ ಪ್ರಾಯೋಗಿಕ ವಿಷಯಗಳಿಗೆ 24 ಗಂಟೆಗಳ ಕಾರ್ಯಭಾರವನ್ನು ನಿಗಧಿಪಡಿಸಿರುತ್ತದೆ. ಅನುದಾನಕ್ಕೆ ಒಳಪಡಿಸುವಾಗ ಕಾರ್ಯಭಾರವನ್ನು ಪರಿಗಣಿಸಲಾಗುತ್ತದೆ ಹೊರತಾಗಿ ಒಂದು ವಿಷಯಕ್ಕೆ ಒಂದು ಉಪನ್ಯಾಸಕರ ನೆಲೆಯಲ್ಲಿ ಅನುದಾನವನ್ನು ನೀಡಲು ಅವಕಾಶ ಇರುವುದಿಲ್ಲ. |

ಸಂಖ್ಯೆ: ಇಪಿ 282 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು